ಉತ್ತೇಜಿತಗೊಂಡು ಮಾತನಾಡತೊಡಗಿದರು.

ನನ್ನ ಪ್ರಕಾರ ಲೇಖಕ ಅಥವಾ ಸಾಹಿತಿ ಅಥವಾ ಕವಿ ಏನು ಬೇಕಾದರೂ ಅನ್ನಿ, ಸರಸ್ವತಿಯ ವರ ಪುತ್ರರು ಅವರು. ಸಮಾಜದ ಸಾಕ್ಷಿಯಾಗಿ ಅವರು ಕೆಲಸ ಮಾಡಬೇಕು. ಸಮಾಜ ಹಾದಿ ತಪ್ಪಿದಾಗ ಅದನ್ನು ಸಾಹಿತಿ ಧೈರ್ಯವಾಗಿ ಹೇಳಬೇಕು. ನೀವು ಸಮಾಜವನ್ನು ರಂಜಿಸಹೊರಟಿದ್ದೀರಿ, ಸಮಾಜಕ್ಕೆ ಏನು ಬೇಕೋ ಅದನ್ನು ನಾನು ಕೊಡುತ್ತಿದ್ದೇನೆ ಎನ್ನುತ್ತೀರಿ. ("ನಾನೇನೂ ಹಾಗೆ ಹೇಳಲಿಲ್ಲವಲ್ಲ" ಎಂದೆ. "ನೀವು ಅಂದರೆ ನೀವೇ ಅಂತ ಅಲ್ಲ, ಈ ಬಗೆಯ ಮಾತುಗಳೂ ಇವೆಯಲ್ಲ, ಆ ಮಾತುಗಳನ್ನು ಹೇಳುವವರೂ ನಿಮ್ಮ ಗೆಳೆಯರೇ ತಾನೆ? ಆ ಮಾತಿಗೆ ನೀವು ಮರುಮಾತು ಆಡಿಲ್ಲ ಅಂದರೆ ಏನರ್ಥ? ನಿಮಗೂ ಆ ಮಾತು ಒಪ್ಪಿಗೆ ಎಂದೇ ತಾನೆ?" ಇದು ಹಿರಿಯರ ಸವಾಲು. ಇದಕ್ಕೆ ನನ್ನ ಬಳಿ ಉತ್ತರವಿರಲಿಲ್ಲ. ಹಿರಿಯರು ಮಾತು ಮುಂದುವರಿಸಿದರು). ''ಅಂದರೆ, ನಿಮ್ಮದು ಮತ್ತು ಸಮಾಜದ್ದು ವ್ಯಾಪಾರದ ಸಂಬಂಧ ಅನ್ನಿ! ನಾನು ಹೇಳುತ್ತೇನೆ, ಸ್ವಾಮೀ, ನೀವು ಅದಕ್ಕಿಂತ ಹೆಚ್ಚಿನದನ್ನು ಮಾಡಬಲ್ಲವರು. ಸಮಾಜದ ಒಂದು ಉತ್ಪನ್ನವೇ ನೀವಾಗಿದ್ದರೂ ಕೂಡ ಸಮಾಜದ ಸಾಮಾನ್ಯ ತಿಳಿವಳಿಕೆಗಿಂತ ಎತ್ತರದಲ್ಲಿ ನಿಂತು ಮಾತನಾಡಿದಾಗ ನಿಮ್ಮ ಮಾತಿಗೊಂದು ಗಹನತೆ ಬರುತ್ತದೆ, ಆಳ ಇರುತ್ತದೆ. ಸಮಾಜಕ್ಕೆ ನಿಮ್ಮ ಮಾತು ಇಷ್ಟವಾಗುವುದಿಲ್ಲ ಎಂತಲೇ ಇಟ್ಟುಕೊಂಡರೂ ಆ ಮಾತುಗಳನ್ನು ನೀವು ಹೇಳಲೇಬೇಕಾಗುತ್ತದೆ.''

ನನ್ನಲ್ಲಿರುವ ಕುಚೋದ್ಯಗಾರ ಸುಮ್ಮನುಳಿಯಲಿಲ್ಲ, ಕೇಳಿದೆ, "ಹೇಳದಿದ್ದರೆ?"

ಹಿರಿಯರು ಒಮ್ಮೆಲೆ ವ್ಯಗ್ರಗೊಂಡರು. "ಹೇಳದಿದ್ದರೆ ಹುಳುಗಳಂತೆ ಸಾಯುತ್ತೀರಿ" ಅವರ ಏರುಧ್ವನಿಯ ಆರ್ಭಟವನ್ನು ಕೇಳಿ ಅಕ್ಕಪಕ್ಕದಲ್ಲಿದ್ದವರೂ ನಮ್ಮತ್ತ ನೋಡಿದರು. ಊಟದ ತಾಟನ್ನು ಮೂಲೆಗಿಟ್ಟು ಕೈ ತೊಳೆದು ಬಿರುಬಿರನೆ ಅವರು ನಡೆದುಬಿಟ್ಟರು. ಮಧ್ಯಾಹ್ನದ ಭಾಗದಲ್ಲಿ ಅವರು ಸಂಕಿರಣದಲ್ಲಿ ಕಾಣಿಸಿಕೊಳ್ಳಲಿಲ್ಲ. ಮತ್ತೆ ಅವರು ಕಾಣಿಸಿಕೊಂಡಿದ್ದು ಸಾಯಂಕಾಲ ಆರುಗಂಟೆಯ ಸುಮಾರಿಗೆ. ಸಂಕಿರಣ ಮುಗಿದು ಎಲ್ಲರೂ ಮಾತನಾಡುತ್ತ ಗುಂಪುಗಳಲ್ಲಿ ನಿಂತುಕೊಂಡಿರುವಾಗ ಹಿಂದುಗಡೆಯಿಂದ ಬಂದು ಮುಗುಳುನಕ್ಕರು. ನಾವಿಬ್ಬರೂ ಎಷ್ಟೋ ವರ್ಷಗಳಿಂದ ಪರಿಚಿತರೆನ್ನಿಸುವಂಥ ನಗುವದು. ಆ ನಗುವಿನ ಸರಳತೆಗೆ ನಾನು ಮಾರು ಹೋದೆ, ನಕ್ಕೆ. ಕೈ ಹಿಡಿದು, "ನಾನಾಡಿದ ಮಾತುಗಳಿಂದ ಬೇಸರವಾಯಿತೆ?'' ಎಂದರು. "ಇಲ್ಲ. ನಿಮ್ಮಂಥವರು ಹಾಗೆ ನೇರವಾಗಿ ಮಾತನಾಡಿದರೆ ನನಗೆ ತುಂಬ ಖುಷಿಯಾಗುತ್ತದೆ'' ಎಂದೆ. ಆ ಮಾತನ್ನು ಅಕ್ಷರಶಃ ನಂಬಿ ಸಮಾಧಾನಗೊಂಡವರಂತೆ ಕಂಡರು. "ಹಾಗಾದರೆ ನೀವು ನನ್ನ ಮನಗೆ ಬರಬೇಕು'' ಎಂದು ಮತ್ತೆ ಎರಡೂ ಕೈ ಹಿಡಿದು ಆರ್ತತೆಯಿಂದ ಒತ್ತಾಯಿಸತೊಡಗಿದರು.

"ಇನ್ನೊಂದು ಸಲ ನಿಮ್ಮ ಮನೆಗೆ ಖಂಡಿತ ಬರುತ್ತೇನೆ, ನಾನು ಇವತ್ತು ರಾತ್ರಿ ಇಲ್ಲುಳಿದು, ನಾಳೆ ನಮ್ಮೂರಿಗೆ ಹೊರಡಬೇಕು. ಬೇಸರ ಮಾಡಿಕೊಳ್ಳಬೇಡಿ'' ಎಂದೆ. ಆಸಾಮಿ ಬಿಡಲೇ ಇಲ್ಲ. "ಇದೆಲ್ಲ ಬೆಂಗಳೂರು ಕಡೆಯಿಂದ ಬಂದವರ ಬಡಿವಾರದ ಮಾತು. ನನಗದು ಬೇಡ. ನೀವು ನನಗೆ ಇಷ್ಟವಾಗಿದ್ದೀರಿ, ಇವತ್ತು ರಾತ್ರಿ ನೀವು ನನ್ನ ಜೊತೆ ಇರಲೇಬೇಕು. ನಮ್ಮ ಊರು ಎಷ್ಟು ಚಂದದ ಊರು ಗೊತ್ತೆ? ನೀವು ಅದನ್ನು ನೋಡಿದರೆ ಖಂಡಿತ ಇಷ್ಟ ಪಡುತ್ತೀರಿ'' ಎಂದರು. "ಆಯಿತು ನೋಡುವಾ'' ಎಂದು ಪಾರಾಗಲೆಂದು ಲಾಡ್ಜ್‌ನ ರೂಮಿನೊಳಗೆ ಹೊಕ್ಕರೆ ಅಲ್ಲಿಗೂ ಬಂದರು. "ನೀವು ನನ್ನ ಮೊಮ್ಮಗನಂತೆ'' ಎಂದರು. ನನ್ನ ಬಟ್ಟೆಗಳನ್ನು ಅವರೇ ಮಡಿಸಿ ಬ್ಯಾಗಿಗೆ ತುಂಬತೊಡಗಿದರು. ಇಷ್ಟರ ಮೇಲೆ ಇನ್ನೇನೂ ಗತ್ಯಂತರವಿರಲಿಲ್ಲ. "ಆಯಿತು ಬಿಡಿ, ಇವತ್ತು ನಿಮ್ಮೂರಿಗೇ ಹೋಗೋಣ'' ಎಂದಾಗ ಚಿಕ್ಕ ಮಗುವಿನಂತೆ ಖುಷಿಯಿಂದ ನಕ್ಕರು. "ನಾನೇ ಗೆದ್ದೆ'' ಎಂದರು.

ಅವರ ಊರು ಸಿರ್ಸಿಯಿಂದ ಯಲ್ಲಾಪುರದ ಹಾದಿಯಲ್ಲಿದೆ. ತ್ಯಾಗನಹಳ್ಳಿಗೆ ಸಿರ್ಸಿಯಿಂದ ದಿನಾಲೂ ಎರಡು ಬಸ್ಸುಗಳಿವೆ. ಈಗ ರಾತ್ರಿ ಎಂಟು ಗಂಟೆಗಿರುವ ಬಸ್ಸು ರಾತ್ರಿ ಆ ಊರಲ್ಲೇ ತಂಗಿ, ಬೆಳಗಿನ ಜಾವ ಆರೂವರೆಗೆಲ್ಲ ಅಲ್ಲಿಂದ ಹೊರಡುತ್ತದೆ. ಆ ಊರಿಗೆ ಹೋಗಲು ಇನ್ನಾವ ಸೌಕರ್ಯವೂ ಇಲ್ಲ. ಊರ ಮಕ್ಕಳು ಶಾಲೆಗೆ ಹೋಗಬೇಕೆಂದರೆ ಮಂಚಿಕೇರಿಗೇ ಬರಬೇಕು. ಇವರು ಅನೇಕ ವರ್ಷಗಳಿಂದ ಒಂದು ಶಾಲೆ